ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ರಾಜ್ಯವು ಸಂಪನ್ಮೂಲ ಕೊರತೆಯನ್ನು ಎದುರಿಸುತ್ತಿರುವುದು ನಿಜ. ಆದರೆ ಮಂಡಿಸಿದ ಸರ್ಕಾರದ ಪೇತನಾದೇಶ ಚೆಕ್ಕುಗಳು ತಿರಸ್ಕೃತವಾಗಿಲ್ಲ.

ಆ) ಉದ್ಭವಿಸುವುದಿಲ್ಲ.

ಮೊನುಗಾರಿಕೆ ಸಲಕರಣೆಗಳಿಗೆ ಮಾರಾಟ ತೆರಿಗೆ

೧೫೨. ಶ್ರೀಮತಿ ವಂನೋರಮ ಮಧ್ವರಾಜ್ (ಉಡುಪಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೀನುಗಾರಿಕೆ ಸಲಕರಣೆಗಳಿಗೆ ಮತ್ತು ಸಂಬಂಧಪಟ್ಟ ವಸ್ತುಗಳಿಗೆ ರಾಜ್ಯದಲ್ಲಿ ವಿಧಿಸಲಾಗುತ್ತಿರುವ ಮಾರಾಟ ತೆರಿಗೆ ದರವು ನೆರೆ ರಾಜ್ಯಗಳಿಗಿಂತ ಹೆಚ್ಚಾಗಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಈ ಸರಕುಗಳಿಗೆ ಮಾರಾಟ ತೆರಿಗೆ ದರವನ್ನು ಕಡಿಮೆ ಮಾಡಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಇಲ್ಲ.

ಆ) 'ಅ' ಪ್ರಶ್ನೆಗೆ ಮೇಲೆ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹೊರನಾಡ ಕನ್ನಡ ಸಂಸ್ಥೆಗಳಿಗೆ ಆರ್ಥಿಕ ಸಹಾಯ ಕುರಿತು

೧೫೫. ಶ್ರೀಮತಿ ವನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೭–೮೮ನೇ ಸಾಲಿನಲ್ಲಿ ರಾಜ್ಯದ ಹೊರಗೆ ಕನ್ನಡಿಗರು ನಡೆಯಿಸುತ್ತಿರುವ ಸಂಸ್ಥೆಗಳಿಗೆ ನೀಡಿರುವ ಆರ್ಥಿಕ ಸಹಾಯ ವೆಷ್ಟು ?

(ಸಂಸ್ಥೆಗಳ ಹೆಸರು, ಉದ್ದೇಶ ಮತ್ತು ಸಹಾಯದ ಮೊತ್ತವನ್ನು ಸಂಸ್ಥೆವಾರು ವಿವರಣೆಯೊಂದಿಗೆ ನೀಡುವುದು)

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧೯೮೭–೮೮ನೇ ಸಾಲಿನ ಡಿಸೆಂಬರ್ ತಿಂಗಳ ಅಂತ್ಯದವರೆಗೆ ರಾಜ್ಯ ಸರ್ಕಾರವು ಒಟ್ಟು ರೂ. ೨೫.೪೫,೫೦೦ ಗಳಷ್ಟು ಸಹಾಯವನ್ನು ದಾನವನ್ನು ರಾಜ್ಯದ ಹೊರಗೆ ಕನ್ನಡಿಗರು ನಡೆಯಿಸುತ್ತಿರುವ ಸಂಸ್ಥೆಗಳಿಗೆ ನೀಡಿದೆ. ಈ ಅನುದಾನವನ್ನು ಸಾಂಸ್ಕೃತಿಕ ಚಟುವಟಿಕೆಗಳು, ಸಾಂಸ್ಕೃತಿಕ ಕೇಂದ್ರಗಳ ನಿರ್ಮಾಣ, ಕನ್ನಡ ಸಂಘಗಳಿಗೆ ಉಪಕರಣಗಳ ಖರೀದಿ, ಕನ್ನಡ ಸಂಘಗಳು ನಡೆಯಿಸುವ ಶಾಲಾ ಕಾಲೇಜುಗಳ ಕಟ್ಟಿಡದ ಬಾಬ್ತು ನೀಡಲಾಗಿದೆ. ಸಂಸ್ಥೆಗಳ ಹೆಸರು ಮತ್ತು ಮಂಜೂರು ಮಾಡಿರುವ ಹಣದ ವಿವರಣೆಯನ್ನು ಅನುಬಂಧದಲ್ಲಿ ಕೊಡಲಾಗಿದೆ.

೧೯೮೭–೮೮ ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಧನ ಸಹಾಯದ ವಿವರ (ಹೊರನಾಡ ಕನ್ನಡ ಸಂಘ ಸಂಸ್ಥೆಗಳಿಗೆ)

೧	ಸೊಲ್ಲಾಪುರದಲ್ಲಿ ಗಡಿನಾಡ ಸಾಹಿತ್ಯ ಸಮ್ಮೇಳನ ನಡೆಸಲು ಧನ ಸಹಾಯ	೨೫,೦೦೦–೦೦
೨	ಮದ್ರಾಸಿನ ಇನ್ಸ್‌ಟಿಟ್ಯೂಟ್ ಆಫ್ ಏಷಿಯನ್ ಸ್ಟಡೀಸ್, ಇವರಿಗೆ ಸಂಘದ ನಿರ್ಮಹಣೆಗಾಗಿ ಅನುದಾನ.	೫೦,೦೦೦–೦೦
೩	ಕನ್ನಡ ಸಂಘ, ಅಯನಾವರಂ, ಮದ್ರಾಸ್, ಇವರಿಗೆ ಕಟ್ಟಡ ನಿರ್ಮಾಣ ಕ್ಕಾಗಿ ಧನಸಹಾಯ.	೨,೦೦,೦೦೦–೦೦